MYSORE LEGISLATIVE ASSEMBLY

THIRTY-FOURTH DAY.

Tuesday, 5th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Assistant Commissioners (with reference to I.A.S. List).

Q.—735. Sri M. CHIKKALINGIAH (Malavalli--Scheduled Castes).—

Will the Government be pleased to state :—

(*a*) the number of officers in the Senior Assistant Commissioners' Cadre in the Revenue Department ;

(*b*) the number of Senior Assistant Commissioners' places vacant at present ;

(*c*) the number of Assistant Commissioners whose names have been included in the I.A.S. list ?

A.—Sri Kadidal MANJAPPA (Minister for Revenue and Public Works).—

(*a*) 10.

(*b*) 9.

(*c*) The number of Mysore Civil Service Officers who are in the Special Eligibility list for admission to the I.A.S. against enhanced quota of 50 per cent reserved for them is 11.

ಶ್ರೀ ಎಂ. ಚಿಕ್ಕಲಿಂಗಯ್ಯ.—ಉತ್ತರದಲ್ಲಿ ಒಂಭತ್ತು vacancy ಗಳಿವೆಯೆಂದು ಹೇಳಿದ್ದೀರಿ. ಆ ಒಂಭತ್ತು vacancyಗಳನ್ನೂ ಏಕೆ fill up ಮಾಡಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಅವರುಗಳಮೇಲೆ ಕೆಲವು I.A.S. ಆಫೀಸರುಗಳಿದ್ದಾರೆ. ಆ I.A.S. ಆಫೀಸರುಗಳು ತಮ್ಮ ತಮ್ಮ ಸ್ಥಾನಗಳಲ್ಲಿ confirm ಆದ ಹೊರತು ಇವುಗಳನ್ನು ಭರ್ತಿ ಮಾಡುವಹಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸಿವಿಲ್ ಲಿಸ್ಟನ್ನು ತಾವು ನೋಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಾಗ್ಗೆ ನೋಡುತ್ತಿರುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಕೊನೆಯ ಅಸಿಸ್ಟೆಂಟ್ ಕಮಿಷನರಾದ ಹೊಂಬಾಳಯ್ಯನವರು 1-10-1953ರಲ್ಲಿ ಅಸಿಸ್ಟೆಂಟ್ ಕಮಿಷನರಾದರು. ಅವರಮೇಲೆ I.A.S. ಆಫೀಸರು ಒಬ್ಬರೂ ಇಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೇ !

ಶ್ರೀ ಕಡಿದಾಳ್ ಮಂಜಪ್ಪ.—I.A.S.ಗೇ ಸಿವಿಲ್ ಲಿಸ್ಟ್‌ನಲ್ಲಿ ಪ್ರತ್ಯೇಕವಾದ ಭಾಗವಿದೆ. ಇನ್ನೊಂದು ಭಾಗದಲ್ಲಿ non-I.A.S. ಇದೆ. ಎರಡನ್ನೂ ಸೇರಿಸಿ ಓದಿದರೆ ಅರ್ಥವಾಗುತ್ತದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ಒಂಭತ್ತು ಜನ ಅಸಿಸ್ಟೆಂಟ್ ಕಮಿಷನರುಗಳೂ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಬೇಕು. ಎಚ್. ಎಂ. ಶ್ರೀನಿವಾಸಯ್ಯ ಅವರುಗಳು I.A.S. ಆಫೀಸರುಗಳಾಗಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಅವರುಗಳಮೇಲಿರುವ I.A.S. ಆಫೀಸರುಗಳಿಗೆ confirmation ಆಗಬೇಕು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸೀನಿಯರ್ I.A.S. ಆಫೀಸರಾಗಿ ಇವರನ್ನು ತಾವು recognise ಮಾಡಿದರೂ ಈ ಗ್ರೇಡನ್ನು ಅವರಿಗೆ ಕೊಡುವುದಿಲ್ಲವೆಂಬುದು ನಿಜವೇ ?

ಶ್ರೀ ಕಡಿದಾಳ್ ಮಂಜಪ್ಪ.—Non-I.A.S. ಡೆಪ್ಯುಟಿ ಕಮಿಷನರ ಗ್ರೇಡ್ ಎಂಬುದಿದೆ. ಅದರ ಪ್ರಕಾರ ಅವರಿಗೆ ಕೊಡುತ್ತೇವೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರನ್ನು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ ಮಾಡಬೇಕಾಗಿರುವುದರಿಂದ, I.A.S.ಗೆ ಅದು ಸಂಬಂಧಪಟ್ಟಿಲ್ಲ. ಅವರನ್ನು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ ಮಾಡುವುದರಲ್ಲಿ ಏನೂ ತೊಂದರೆಯಿಲ್ಲವೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರ ಅಭಿಪ್ರಾಯ ಹಾಗಿದೆ. ಆದರೆ, ಆ ಸ್ಥಾನಗಳು release ಆಗುವವರೆಗೂ ಮಾಡುವ ಹಾಗಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರನ್ನು ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿ recognise ಮಾಡಿದ ಹೊರತು ಅವರಿಗೆ ಡೆಪ್ಯುಟಿ ಕಮಿಷನರ ಕೆಲಸ ಸಿಕ್ಕುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಲೆಜಿಟಿ ಮೇಟ್ ಆಗಿ, ಅವರಿಗೆ ಬರಬೇಕಾದ ಪ್ರಮೋಷನ್ನನ್ನು ಎರಡು ವರ್ಷಗಳಿಂದ ನಿಲ್ಲಿಸಿರುವುದರಿಂದ ಅವರಿಗೆ discourage ಆಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—Legitimate ಎಂದು ಹೇಳುವುದಕ್ಕಾಗುವುದಿಲ್ಲ. I.A.S.ನವರು confirm ಆದ ತಕ್ಷಣ ಇವರು automatic ಆಗಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಲವತ್ತೊಂದು ಜನರನ್ನು I.A.S. eligibility ಲಿಸ್ಟಿನಲ್ಲಿ ಸೇರಿಸಿದ್ದೇವೆಂದು ಹೇಳಿದ್ದೀರಿ. ಆ ನಲವತ್ತೊಂದು ಜನರಲ್ಲಿ ಈ ಒಂಭತ್ತು ಜನರೂ ಕೂಡ ಸೇರಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಹೇಳಿರುವುದು ಒಂಭತ್ತು ಜನವಲ್ಲ : ಒಂಭತ್ತು ಸ್ಥಾನಗಳು. ಎಲಿಜಿಬಿಲಿಟಿ ಲಿಸ್ಟಿನಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾಗಿದ್ದವರು ಮತ್ತು ಡೆಪ್ಯುಟಿ ಕಮಿಷನರರಾಗಿ promote ಆಗಿರುವವರು ಕೆಲವರು ಸೇರಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಈ ನಲವತ್ತೊಂದು ಜನರಲ್ಲಿ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರಾಗಿರುವವರು ತಾನೆ ಸೇರಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಇಲ್ಲ; ಅನೇಕ ಸಂದರ್ಭಗಳಲ್ಲಿ ನಾನು ಹೇಳಿದ್ದೇನೆ. ಈ transitional periodನಲ್ಲಿ I.A.S. ನೇಮಕ ಮಾಡುವುದರಲ್ಲಿ, ಶೇಕಡ ಐವತ್ತನ್ನು ಪ್ರಮೋಷ್ ಕೋಟಾ ಎಂದು ಕೊಟ್ಟರು. ಈ ಪ್ರಮೋಷ್ ಕೋಟಾ ನಿಗದಿ ಮಾಡುವುದರಲ್ಲಿ, non-I.A.S. ಆಫೀಸರುಗಳಿದ್ದಾರಲ್ಲಾ ಅವರಲ್ಲಿ ಯಾರಾರನ್ನು eligibility ಲಿಸ್ಟಿಗೆ ಸೇರಿಸಬಹುದೆಂಬುದನ್ನು ನೋಡಲು ಒಂದು ಕಮಿಟಿ ಮಾಡಿದೆ. ಆ ಕಮಿಟಿಯವರು ಒಂದು ಲಿಸ್ಟ್ ತಯಾರುಮಾಡಿ ಕೇಂದ್ರ ಸರ್ಕಾರದವರಿಗೆ ಕಳುಹಿಸಿದ್ದಾರೆ. ಆ ಪಟ್ಟಿಯಲ್ಲಿ ಈ ನಲವತ್ತೊಂದು ಜನರು ಸೇರಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ನಲವತ್ತೊಂದು ಜನರನ್ನು ಸೇರಿಸಿಕೊಂಡರೆಂದು ಹೇಳಿದರಲ್ಲಾ ಅವರನ್ನು ಸೇರಿಸಿಕೊಂಡುದು ಬ್ಯಾನರ್ಜಿ ಕಮಿಟಿ ಅಲ್ಲದೆ ಬೇರೆ ಕಮಿಟಿಯ ರಿಪೋರ್ಟಿನ ಮೇಲಲ್ಲವೇ !

ಶ್ರೀ ಕಡಿದಾಳ್ ಮಂಜಪ್ಪ.—ಹೌದು. ಬ್ಯಾನರ್ಜಿ ಕಮಿಟಿಯವರು ಮಾಡಿದ್ದನ್ನು direct recruitment ಎಂದು ಪರಿಗಣಿಸುತ್ತಾರೆ. ಇದು ಬೇರೆ.

Sri S. SRINIVASA IYENGAR.—Will the Government be pleased to state whether the special eligibility list is considered to be the approved list ?

Sri Kadidal MANJAPPA.—We still contend that it should be deemed as an approved list, because there is an agreement between this Government and the Central Government that a committee should be constituted to interview the officers and prepare the list. Accordingly a committee had been constituted under my chairmanship and we have sent our recommendation. With some alteration they have approved the list of 41 persons. We contend that it should be the approved list subject, of course, or the condition that if the performance of any officer in the list approved is found to be bad subsequently, he may not be eligible.

Sri S. SRINIVASA IYENGAR.—Then what is the stand of the Government of India towards the contention of the Government of Mysore ?

Sri Kadidal MANJAPPA.—They say that this list is subject to the promotional rules.

Sri S. SRINIVASA IYENGAR.—In the promotional rules, is it laid down that when a promotion is to be done, it should be done by a select committee after interview ?

Sri Kadidal MANJAPPA.—I remember it is so, but I am not sure about the position.

Sri S. SRINIVASA IYENGAR.—Will the Government be pleased to state whether they did not resort to interview and other scrutiny while selecting these 41 names ?

Sri Kadidal MANJAPPA.—They were interviewed and their confidential reports were gone through.

Sri S. SRINIVASA IYENGAR.—When that is so, why should they be subjected to interview once again ?

Sri Kadidal MANJAPPA.—Therefore I contended that it is not necessary.

Sri S. SRINIVASA IYENGAR.—Have Government of India accepted that ?

Sri Kadidal MANJAPPA.—We are thinking of writing to them once again.

Elections to District Boards.

Q.—693. **Sri S. KARIAPPA** (Virupakshapura).—

Will the Government be pleased to state :—

(*a*) when the elections to the District Boards are likely to take place ;

(*b*) whether the calendar of events for the said elections is under preparation ?

A.—**Sri T. CHANNIAH** (Minister for Public Health and Local Self-Government).—

(*a*) After the Amending Bill for the Village Panchayets and District Boards Act of 1952 is passed into law.

(*b*) No.